## ಶಿವ ಅವತರಣೆ ಮತ್ತು ಆರ್ಥಿಕತೆಯ (ಉಳಿತಾಯದ) ಅವತರಣೆ

ಇಂದು ತ್ರಿಮೂರ್ತಿ ಶಿವ ತಂದೆಯು ಅತ್ಯಂತ ಪ್ರೀತಿಯ ಹಾಗೂ ಮಧುರ ಸಾಲಿಗ್ರಾಮ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಇಂದು ಶಿವ ಮತ್ತು ಸಾಲಿಗ್ರಾಮಗಳ ವಿಶೇಷ ದಿನವಾಗಿದೆ. ತಂದೆಗೆ ಮಕ್ಕಳನ್ನು ಮಿಲನ ಮಾಡಿ ಖುಷಿಯಾಗುತ್ತಿದೆ ಏಕೆಂದರೆ ಮಕ್ಕಳ ಹುಟ್ಟು ಹಬ್ಬ ತಂದೆ ಆಚರಿಸಲು ಬಂದಿದ್ದಾರೆ ಮತ್ತು ಮಕ್ಕಳು ಹೇಳುತ್ತಾರೆ ನಾವು ತಂದೆಯ ಹುಟ್ಟು ಹಬ್ಬ ಆಚರಿಸಲು ಬಂದಿದ್ದೇವೆ. ತಂದೆಗೂ ಖುಷಿಯಿದೆ ಮತ್ತು ಮಕ್ಕಳಿಗೂ ಖುಷಿಯಿದೆ. ಏಕೆ? ಏಕೆಂದರೆ ಈ ಜನ್ಮದಿನ ಇಡೀ ಕಲ್ಪದಲ್ಲಿ ಭಿನ್ನ ಮತ್ತು ಪ್ರಿಯವಾಗಿದೆ. ಇಡೀ ಕಲ್ಪದಲ್ಲಿ ಇಂತಹ ಜನ್ಮದಿನವನ್ನು ಯಾರು ಆಚರಿಸುವುದಿಲ್ಲ. ತಂದೆ ಮತ್ತು ಮಕ್ಕಳದು ಒಟ್ಟಿಗೆ ಒಂದೇ ಸಮಯದಲ್ಲಿ ಹುಟ್ಟುಹಬ್ಬವಿರಲಿ - ಇದು ಮತ್ತ್ಯಾವುದೇ ಸಮಯದಲ್ಲಿ ಯಾರದ್ದೂ ಇರುವುದಿಲ್ಲ. ಆದ್ದರಿಂದ ಮೊದಲನೆಯದಾಗಿ ಬಾಪ್ದಾದಾರವರು ಮಕ್ಕಳಿಗೆ ಪದಮ-ಪದಮ-ಪದಮಗುಣ ಶುಭಾಷಯಗಳನ್ನು ಕೊಡುತ್ತಿದ್ದಾರೆ. ಮಕ್ಕಳ ಶುಭಾಷಯಗಳಂತು ಅಮೃತವೇಳೆಯಿಂದ ಬಹಳ-ಬಹಳ ಹೃದಯದಿಂದ, ಹೃದಯದ ಶುಭಾಷಯಗಳು ಬಾಪ್ದಾದಾರವರ ಹತ್ತಿರ ತಲುಪಿ ಬಿಟ್ಟಿದೆ. ಬಾಪ್ದಾದಾರವರು ಇಷ್ಟೊಂದು ಮಕ್ಕಳಿಗೆ, ಸಾಲಿಗ್ರಾಮಗಳನ್ನು ನೋಡಿ ಇದೇ ಖುಷಿಯ ಹಾಡು ಹೃದಯದಲ್ಲಿ ಹಾಡುತ್ತಿದ್ದಾರೆ – ವಾಹ್ ಅಗಲಿ ಮರಳಿ ಸಿಕ್ಕಿರುವ ಮಕ್ಕಳೇ ವಾಹ್! ವಾಹ್ ಮುದ್ದು ಮಕ್ಕಳೇ ವಾಹ್! ವಾಹ್ ಅಲೌಕಿಕ ಜನ್ಮ, ಅಲೌಕಿಕ ಹುಟ್ಟುಹಬ್ಬವನ್ನು ಆಚರಿಸುವಂತಹವರೇ ವಾಹ್! ಅಂದಾಗ ಬಾಪ್ದಾದಾರವರು ಪ್ರತಿ ಮಕ್ಕಳಿಗಾಗಿ ವಾಹ್-ವಾಹ್ನ ಗೀತೆ ಹಾಡುತ್ತಿದ್ದಾರೆ ಏಕೆಂದರೆ ಇಷ್ಟೊಂದು ವಿಶ್ವದ ಆತ್ಮರಲ್ಲಿ ಎಷ್ಟು ಕಡಿಮೆ ನೀವು ಮಕ್ಕಳ ತರಹ ಪದಮಾಪದಮ ಭಾಗ್ಯವಂತರಾಗಿದ್ದೀರಿ ಮತ್ತು ಮುಂದೆಯು ಭಾಗ್ಯವಂತರಾಗಿರುತ್ತಾರೆ. ಅಮರ ಭಾಗ್ಯವಾನ ಅರ್ಧಕಲ್ಪ ಇರುತ್ತಾರೆ. ಒಂದು ಜನ್ಮದ ವರದಾನವಲ್ಲ, ಅನೇಕ ಜನ್ಮ ಅಮರ ವರದಾನಿಯಾಗುತ್ತಾರೆ. ಇಂತಹ ಮಕ್ಕಳಿಗೆ ತಮ್ಮ ಸ್ವಮಾನ ಎಷ್ಟು ಸ್ಮೃತಿಯಲ್ಲಿ ಇರುತ್ತದೆ? ಈ ಅಲೌಕಿಕ ಹುಟ್ಟು ಹಬ್ಬ ಅಥವಾ ಅಲೌಕಿಕ ಜನ್ಮದ ಅಖುಟ (ಅವಿನಾಶಿ) ಆಸ್ತಿ ತಂದೆಯು ಜನ್ಮದಿಂದಲೇ ಮಕ್ಕಳಿಗೆ ಕೊಡುತ್ತಾರೆ. ಜನ್ಮದಿಂದಲೇ ಸ್ಮೃತಿಯ ಶ್ರೇಷ್ಠ ತಿಲಕ ಪ್ರತಿ ಮಕ್ಕಳಿಗೆ ತಂದೆಯು ಕೊಟ್ಟು ಬಿಟ್ಟಿದ್ದಾರೆ. ತಿಲಕ ಹಚ್ಚಲಾಗಿದೆಯೇ? ಬ್ರಾಹ್ಮಣ ಜೀವನವಿದೆಯೆಂದರೆ ತಿಲಕವೂ ಅವಿನಾಶಿಯಾಗಿದೆ. ಬ್ರಾಹ್ಮಣರ ಮಸ್ತಕದಲ್ಲಿ ತಿಲಕ, ಇದು ಶ್ರೇಷ್ಠ ಭಾಗ್ಯದ ಲಕ್ಷಣವಾಗಿದೆ.

ನೀವೆಲ್ಲರೂ ಮತ್ತು ನಾಲ್ಕಾರು ಕಡೆಯ ಮಕ್ಕಳು ದೂರ ಕುಳಿತ್ತಿದ್ದರು ಸಹ ಬಹಳ ಉಮಂಗ-ಉತ್ಸಾಹದಿಂದ ಈ ಭಿನ್ನ ಮತ್ತು ಪ್ರಿಯ ಜನ್ಮದಿನವನ್ನು ಆಚರಿಸುತ್ತಿದ್ದೀರಿ. ಆಚರಿಸುತ್ತಿದ್ದೀರಲ್ಲವೇ? ತಂದೆಯು ನಮ್ಮ ಜನ್ಮದಿನವನ್ನು ಆಚರಿಸುತ್ತಿದ್ದಾರೆ ಮತ್ತು ನಾವು ತಂದೆಯ ಜನ್ಮದಿನವನ್ನು ಆಚರಿಸುತ್ತಿದ್ದೇವೆಂದು ಎಲ್ಲರಿಗೂ ಖುಷಿಯಾಗುತ್ತಿದೆ. ಎಷ್ಟು ಖುಶಿಯಿದೆ! ಖುಷಿಯನ್ನು ಅಳತೆ ಮಾಡಲು ಸಾಧ್ಯವೇ? ಅಳತೆಯಿದೆಯೇ? ಈ ಪ್ರಪಂಚದಲ್ಲಿ, ಈ ಅಲೌಕಿಕ ಖುಶಿಯ ಯಾವುದೇ ಅಳತೆ ಮಾಡುವ ಸಾಧನವನ್ನು ಕಂಡುಹಿಡಿದಿಲ್ಲ. ಒಂದುವೇಳೆ ನಿಮಗೆ ಸಾಗರದಷ್ಟು ಖುಷಿಯಿದೆಯೇ ಎಂದು ಕೇಳಿದರೆ ಏನು ಹೇಳುತ್ತೀರಿ? ಸಾಗರವಂತು ಏನು ಇಲ್ಲ. ಒಳ್ಳೆಯದು ಆಕಾಶದಷ್ಟಿದೆಯೇ? ಆಕಾಶದಿಂದಲೂ ಮೇಲೆ ನಿಮ್ಮ ಮನೆಯಿದೆ, ನಿಮ್ಮದು ಸೂಕ್ಷ್ಮವತನವಿದೆ ಇದಕ್ಕಾಗಿ ಯಾವುದೇ ತೂಕ ಅಳತೆಯಿಲ್ಲ, ಇರಲು ಸಾಧ್ಯವಿಲ್ಲ. ಒಂದು ಕೈಯ ಚಪ್ಪಾಳೆ ತಟ್ಟುವಷ್ಟು ಖುಷಿಯಿದೆಯೇ. (ಎಲ್ಲರೂ ಚಪ್ಪಾಳೆ ತಟ್ಟಿದರು) ಖುಷಿಯಿದೆ – ಇದರಲ್ಲಂತು ಎಲ್ಲರೂ ಕೈ ಎತ್ತಿದ್ದರು. ಶುಭಾಷಯಗಳು. ಈಗ ಎರಡನೇ ಪ್ರಶ್ನೆಯಿದೆ, (ತಿಳಿದುಕೊಂಡಿದ್ದೀರಿ ಅದಕ್ಕೆ ನಗುತ್ತಿದ್ದೀರಿ) ಬಾಪ್ದಾದಾರವರು ಪ್ರತಿ ಮಕ್ಕಳನ್ನು ಸದಾ ಅರಳಿರುವ ಆತ್ಮಿಕ ಗುಲಾಬಿಯನ್ನು ನೋಡಲು ಬಯಸುತ್ತಾರೆ. ಅರ್ಧ ಅರಳಿರುವವರಲ್ಲ, ಸದಾ ಮತ್ತು ಹೂ. ಅರಳಿರುವ ಹೂ ಎಷ್ಟು ಪ್ರಿಯವೆನಿಸುತ್ತದೆ. ನೋಡುವುದರಲ್ಲಿಯೇ ಮಜಾ ಬರುತ್ತದೆ. ಮತ್ತು ಸ್ವಲ್ಪ ಬಾಡಿ ಹೋದರೂ ಏನು ಮಾಡುತ್ತೀರಿ? ದೂರವಾಗಿಬಿಡುತ್ತೀರಿ. ಬಾಪ್ದಾದಾರವರು ದೂರ ಮಾಡುವುದಿಲ್ಲ ಆದರೆ ಅವರು ಸ್ವಯಂ ದೂರವಾಗಿಬಿಡುತ್ತಾರೆ.

ಇಂದು ಆಚರಿಸುವ ದಿನವಾಗಿದೆಯಲ್ಲವೇ! ಮುರಳಿಯನ್ನು ಸದಾ ಕೇಳುತ್ತೀರುತ್ತೀರಿ. ಇಂದು ಬಹಳ ಖುಶಿಯಲ್ಲಿ ಮನಸ್ಸಿನಿಂದ ನೃತ್ಯ ಮಾಡಿರಿ ಮತ್ತು ಹಾಡಿರಿ. ಮನಸ್ಸಿನಿಂದ ನೃತ್ಯ ಮಾಡಿರಿ, ಕಾಲಿನಿಂದಲ್ಲ. ಕಾಲಿನಿಂದ ನೃತ್ಯ ಮಾಡುವುದು ಆರಂಭಿಸಿದರೆ ಹೊಡೆದಾಟವಾಗಿಬಿಡುವುದು. ಆದರೆ ಮಕ್ಕಳು ನೃತ್ಯವನ್ನು ಮಾಡುತ್ತಿದ್ದಾರೆ ಮತ್ತು ಮಧುರಾತಿ ಮಧುರ ತಂದೆಯ ಮಹಿಮೆ ಮತ್ತು ತಮ್ಮ ಅಲೌಕಿಕ ಮಹಿಮೆಯ ಗೀತೆಯನ್ನು ಬಹಳ ಹಾಡುತ್ತಿರುವುದನ್ನು ಬಾಪ್ದಾದಾರವರು ನೋಡುತ್ತಿದ್ದಾರೆ. ಬಾಬಾರವರಿಗೆ ನಿಮ್ಮ ಮನಸ್ಸಿನ ಧ್ವನಿಯು ತಲುಪುತ್ತಿದೆ. ಎಲ್ಲಾ ದೇಶಗಳಿಂದ ಧ್ವನಿಯು ಬರುತ್ತಿದೆ. ತಂದೆಯ ಧ್ವನಿಯು ಕೇಳುತ್ತಿದ್ದೀರಿ ಮತ್ತು ತಂದೆಯು ಮಕ್ಕಳ ಧ್ವನಿಯನ್ನು ಕೇಳುತ್ತಿದ್ದಾರೆ. ತಂದೆಯು ಹೇಳುತ್ತಿದ್ದಾರೆ ಹೇ ವಿಶ್ವದ ಬಹಳ-ಬಹಳ ಸ್ನೇಹಿ ಮಕ್ಕಳೇ ಚೆನ್ನಾಗಿ ನೃತ್ಯ ಮಾಡಿರಿ, ಚೆನ್ನಾಗಿ ಹಾಡಿ ಮತ್ತೇನು ಕೆಲಸವಿದೆ? ಬ್ರಾಹ್ಮಣರ ಕೆಲಸ ಏನಾಗಿದೆ? ಯೋಗ ಜೋಡಿಸುವುದು ಏನಾಗಿದೆ? ಪರಿಶ್ರಮವಿದೆಯೇ? ಯೋಗದ ಅರ್ಥವಾಗಿದೆ ಆತ್ಮ ಮತ್ತು ಪರಮಾತ್ಮನ ಮಿಲನ. ಮಿಲನದಲ್ಲಿ

ಏನು ಆಗುತ್ತದೆ? ಖುಷಿಯಲ್ಲಿ ನೃತ್ಯ ಮಾಡಿರಿ. ತಂದೆಯ ಮಹಿಮೆಯ ಮಧುರಾತಿ ಮಧುರ ಗೀತೆ ಹೃದಯ ಸ್ವತಃ ಹಾಡುತ್ತಿದೆ. ಬ್ರಾಹ್ಮಣರ ಕೆಲಸವೇ ಇದಾಗಿದೆ, ಹಾಡು ಮತ್ತು ನೃತ್ಯ ಮಾಡಿರಿ. ಇದು ಕಷ್ಟವೇ? ನೃತ್ಯ ಮಾಡುವುದು ಹಾಡುವುದು ಕಷ್ಟವೇ? ಇಲ್ಲ ಅಲ್ಲವೇ! ಯಾರಿಗೆ ಕಷ್ಟವೆನಿಸುತ್ತದೆ ಅವರು ಕೈ ಎತ್ತಿರಿ. ಇತ್ತೀಚೆಗಂತು ನೃತ್ಯ ಮಾಡುವ ಹಾಡುವ ಸೀಜûನ್ ಆಗಿದೆ, ಅಂದಾಗ ನೀವು ಏನು ಮಾಡಬೇಕು? ನೃತ್ಯ ಮಾಡಿರಿ, ಹಾಡಿರಿ. ಸಹಜವಾಗಿದೆಯಲ್ಲವೇ? ಸಹಜವಾಗಿದೆ ಎಂದಮೇಲೆ ಕತ್ತನ್ನು ಅಲುಗಾಡಿಸಿರಿ. ಕಷ್ಟವಿಲ್ಲವೇ? ಉದ್ದೇಶಪೂರ್ವಕವಾಗಿ ಸಹಜನಿಂದ ದೂರವಾಗಿ ಕಷ್ಟದಲ್ಲಿ ಹೋಗಿಬಿಡುತ್ತೀರಿ. ಕಷ್ಟವಿಲ್ಲ, ಬಹಳ ಸಹಜವಿದೆ ಏಕೆಂದರೆ ತಂದೆಯು ತಿಳಿದುಕೊಂಡಿದ್ದಾರೆ ಅರ್ಧಕಲ್ಪದಿಂದ ಕಷ್ಟದ ಜೀವನ ನಡೆಸಿದ್ದಾರೆ ಇದಕ್ಕಾಗಿ ಈ ಸಮಯ ಸಹಜವಾಗಿದೆ. ಕಷ್ಟದ್ದು ಏನಾದರೂ ಇದೆಯೇ? ಕೆಲವೊಮ್ಮೆ ಕಷ್ಟವೆನಿಸುತ್ತದೆಯೇ? ಹೇಗೆ ಯಾರಾದರೂ ನಡೆಯುತ್ತ- ನಡೆಯುತ್ತ ದಾರಿಯನ್ನು ಮರೆತು ಬೇರೆ ದಾರಿಯಲ್ಲಿ ಹೋದರೆ ಕಷ್ಟವೆನಿಸುತ್ತದೆಯಲ್ಲವೇ. ಜ್ಞಾನ ಮಾರ್ಗವು ಕಷ್ಟವಿಲ್ಲ. ಬ್ರಾಹ್ಮಣ ಜೀವನ ಕಷ್ಟವಿಲ್ಲ. ಬ್ರಾಹ್ಮಣರ ಬದಲಾಗಿ ಕ್ಷತ್ರಿಯರಾಗುತ್ತೀರೆಂದಾಗ ಕ್ಷತ್ರಿಯರ ಕೆಲಸವೇ ಆಗಿದೆ ಹೊಡೆದಾಡುವುದು, ಜಗಳವಾಡುವುದು.. ಅದಂತು ಕಷ್ಟವೇ ಆಗುತ್ತದೆಯಲ್ಲವೇ! ಯುದ್ಧ ಮಾಡುವುದು ಕಷ್ಟವಾಗುತ್ತದೆ, ಆನಂದವಾಗಿರುವುದು ಸಹಜವಾಗುತ್ತದೆ.

ಡಬಲ್ ವಿದೇಶಿಯರು ಮೋಜು ಆಚರಿಸುವವರಲ್ಲವೇ! ಒಂದು ಕ್ಷಣ ಚಪ್ಪಾಳೆ ತಟ್ಟಿ. ಮೋಜಿನಲ್ಲಿದ್ದೀರಾ? ಅಲ್ಲಿ ಹೋಗಿ ತಬ್ಬಿಬ್ಬರಾಗುವುದಿಲ್ಲವೇ? ನೋಡಿ, ಇಂದು ಶಿವ ಜಯಂತಿಯ ಮಹತ್ವ ಎರಡು ಮಾತಿನದಾಗಿದೆ. ಒಂದು ಈ ದಿನ ವ್ರತವನ್ನು ಇಡುತ್ತಾರೆ. ಡಬಲ್ ವಿದೇಶಿಯರಂತು ಆಚರಿಸುವ ಅವಶ್ಯಕತೆಯೇ ಬಿದ್ದಿಲ್ಲ. ಭಾರತದಲ್ಲಿಯೇ ಆಚರಿಸುತ್ತಾರೆ, ಈ ದಿನದ ಮಹತ್ವವಾಗಿದೆ – ವ್ರತವನ್ನು ಇಡುವುದು ಮತ್ತು ಇನ್ನೊಂದು ಜಾಗರಣೆ ಮಾಡುವುದು. ನೀವು ಎಲ್ಲರು ವ್ರತವನ್ನೂ ತೆಗೆದುಕೊಂಡಿದೀರಲ್ಲವೇ? ಪಕ್ಕಾ ವ್ರತವನ್ನು ತೆಗೆದುಕೊಂಡಿದ್ದೀರಾ? ಅಥವಾ ಕೆಲವೊಮ್ಮೆ ಕಚ್ಚಾ, ಕೆಲವೊಮ್ಮೆ ಪಕ್ಕಾ? ಕಾಯಿಯಾಗಿರುವ ವಸ್ತು ಇಷ್ಟವಾಗುತ್ತದೆಯೇ? ಪಕ್ವವಾಗಿರುವುದು ಎಲ್ಲವು ಇಷ್ಟವಾಗುತ್ತದೆಯಲ್ಲವೇ. ವ್ರತ ಏನು ತೆಗೆದುಕೊಂಡಿದ್ದೀರಿ? ಬಾಪ್ದಾದಾರವರು ಎಲ್ಲದಕ್ಕಿಂತ ಮೊದಲನೇ ವ್ರತ ಯಾವುದು ಕೊಟ್ಟರು? ಯಾವಾಗ ಸ್ಮೃತಿಯ ತಿಲಕವನ್ನು ಇಟ್ಟರು ಆಗ ಮೊಟ್ಟ ಮೊದಲನೇ ವ್ರತ ಯಾವುದು ತೆಗೆದುಕೊಂಡಿರಿ? ನೆನಪಿದೆಯಲ್ಲವೇ? ಸಂಪೂರ್ಣ ಪವಿತ್ರ ಭವ. ತಂದೆಯು ಹೇಳಿದರು ಮತ್ತು ಮಕ್ಕಳು ಧಾರಣೆ ಮಾಡಿದರು. ಪವಿತ್ರತೆಯ ವ್ರತ ಕೇವಲ ಬ್ರಹ್ಮಚರ್ಯದ ವ್ರತವಲ್ಲ ಆದರೆ ಬ್ರಹ್ಮಾ ತಂದೆಯ ಸಮಾನ ಪ್ರತಿ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಪವಿತ್ರತೆ – ಇದಕ್ಕೆ ಹೇಳಲಾಗುತ್ತದೆ ಬ್ರಹ್ಮಚಾರಿ ಮತ್ತು ಬ್ರಹ್ಮಾಚಾರಿ. ಪ್ರತಿ ಮಾತಿನಲ್ಲಿ ಪವಿತ್ರತೆಯ ಪ್ರಕಂಪನಗಳು ಸಮಾವೇಶವಾಗಿದೆ. ಪ್ರತಿ ಸಂಕಲ್ಪದಲ್ಲಿ ಪವಿತ್ರತೆಯ ಮಹತ್ವವಿದೆ. ಪ್ರತಿ ಕರ್ಮದಲ್ಲಿ, ಕರ್ಮ ಮತ್ತು ಯೋಗ ಅರ್ಥಾತ್ ಕರ್ಮಯೋಗಿಯ ಅನುಭವವಿರಲಿ - ಇದಕ್ಕೆ ಹೇಳಲಾಗುತ್ತದೆ ಬ್ರಹ್ಮಾಚಾರಿ. ಬ್ರಹ್ಮಾ ತಂದೆಯನ್ನು ನೋಡಿ ಪ್ರತಿ ಮಾತು ಮಹಾವಾಕ್ಯ, ಸಾಧಾರಣ ವಾಕ್ಯವಲ್ಲ ಏಕೆಂದರೆ ನಿಮ್ಮ ಜನ್ಮವೇ ಸಾಧಾರಣವಲ್ಲ, ಅಲೌಕಿಕವಾಗಿದೆ. ಅಲೌಕಿಕತೆಯ ಅರ್ಥವೇ ಆಗಿದೆ ಪವಿತ್ರತೆ. ಪ್ರತಿ ದಿನ ರಾತ್ರಿ ತಮ್ಮ ಟೀಚರ್ ಆಗಿ ಚೆಕ್ ಮಾಡಿಕೊಳ್ಳಿರಿ ಮತ್ತು ತಮಗೆ ಪರ್ಸೆಂಟೇಜ್ ಪ್ರಮಾಣ ತಮಗೆ ತಾವೇ ಅಂಕಗಳನ್ನು ಕೊಡಿ, 100 ಪ್ರತಿಶತರಾಗಬೇಕು, ಆದರೆ ಪ್ರತಿ ದಿನ ತಮ್ಮ ತಾವು ನೋಡಿಕೊಳ್ಳಿರಿ, ಬೇರೆಯವರನ್ನು ನೋಡಬಾರದು. ತಮ್ಮ ಬದಲಾಗಿ ಅನ್ಯರನ್ನು ನೋಡಲು ತೊಡಗುತ್ತೀರಿ, ಅದು ಸಹಜವೆನಿಸುತ್ತದೆ ಎಂದು ಬಾಪ್ದಾದಾರವರು ನೋಡಿದರು. ತಮ್ಮನ್ನು ನೋಡಿಕೊಳ್ಳಿರಿ ಇಂದು ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಎಷ್ಟು ಶೇಕಡವಿತ್ತು?

ನೀವು ಈ ವರ್ಷ ನಾಲ್ಕಾರು ಕಡೆ ಏನು ಸಂದೇಶ ಕೊಟ್ಟಿದ್ದೀರಿ? ಪರಿವರ್ತನೆ ಎಲ್ಲಾ ಕಾರ್ಯಕ್ರಮದಲ್ಲಿ ಹೇಳಿದ್ದೀರಿ. ಎಲ್ಲೆಲ್ಲಿ ಭಾಷಣ ಮಾಡಿದ್ದೀರಿ ಅಲ್ಲಿ ಪರಿವರ್ತನೆಯ ವಿಷಯದ ಮೇಲೆ ಚೆನ್ನಾಗಿ ಭಾಷಣ ಮಾಡಿದ್ದೀರಿ. ಈ ವರ್ಷ ನಾಲ್ಕಾರು ಕಡೆ ಸೇವೆಯಲ್ಲಿ ಬೇರೆಯವರಿಗೂ ಪರಿವರ್ತನೆಯ ಲಕ್ಷ್ಯ ಬಹಳ ಚೆನ್ನಾಗಿ ಆಡಂಬರದಿಂದ ಕೊಟ್ಟಿದ್ದೀರಿ, ಬಾಪ್ದಾದಾರವರು ಖುಷಿಯಾಗಿದ್ದಾರೆ. ತಾವು ತಮಗಾಗಿಯೂ ಇದನ್ನು ಚೆಕ್ ಮಾಡಿಕೊಳ್ಳಿರಿ - ಪ್ರತಿ ದಿನ ಎಷ್ಟು ಪರ್ಸೆಂಟೇಜ್ನಲ್ಲಿ ಪರಿವರ್ತನೆಯಾಗಿದೆ? ಪರಿವರ್ತನೆ ಏರುವ ಕಲೆಯದಾಗಿರಲಿ, ಇಳಿಯುವ ಕಲೆಯದ್ದಲ್ಲ. ಬಾಪ್ದಾದಾರವರು ಸಹ ಪ್ರತಿಯೊಬ್ಬ ಮಗುವಿನ ಚಾರ್ಟ್ ನೋಡುತ್ತಾರೆ. ನೀವು ಯೋಚಿಸುತ್ತೀರಿ ಎಲ್ಲಾ ಮಕ್ಕಳದ್ದು ನೋಡುತ್ತಾರೆಯೇ ಅಥವಾ ಕೆಲ ವಿಶೇಷ ಆತ್ಮರದ್ದು ನೋಡುತ್ತಾರೆಯೇ! ಬಾಪ್ದಾದಾರವರು ಎಲ್ಲಾ ಮಕ್ಕಳ ಚಾರ್ಟ ಕೆಲ-ಕೆಲವೊಮ್ಮೆ ನೋಡುತ್ತಾರೆ, ಪ್ರತಿ ದಿನ ನೋಡುವುದಿಲ್ಲ ಆದರೆ ಕೆಲ-ಕೆಲವೊಮ್ಮೆ ನೋಡುತ್ತಾರೆ – ಅವರು ಅಂತಿಮದವರಾಗಿರಲಿ, ಅಥವಾ ಮೊದಲನೇಯವರು. ಎಲ್ಲರು ನಗುತ್ತಿದ್ದೀರೆಂದ ಮೇಲೆ ಬಾಪ್ದಾದಾರವರೇ ತಿಳಿಸುತ್ತಾರೆ ಚಾರ್ಟ್ ಏನಾಗಿದೆಯೆಂದು? ಈ ದಿನ ಆಚರಿಸುವುದಾಗಿದೆ, ಅದಕ್ಕೆ ತಿಳಿಸುವುದಿಲ್ಲ. ಆದರೆ ಮುಂದಕ್ಕೆ ಎಚ್ಚರಿಸುತ್ತಿದ್ದಾರೆ ಇಂದಿನದ ಏನು ಮಹತ್ವವಿದೆ ವ್ರತ ಇಡುವುದು ಅರ್ಥಾತ್ ದೃಢ ಸಂಕಲ್ಪ ಮಾಡುವುದು. ವ್ರತವನ್ನು ಸತ್ಯ ಭಕ್ತರೆಂದು ಮುರಿಯುವುದಿಲ್ಲ, ಬಾಪ್ದಾದಾರವರು ಪುನಃ ಮುಂದಕ್ಕೆ ಎಚ್ಚರಿಸುತ್ತಿದ್ದಾರೆ ಈಗಲೂ ಸಹ ಮೊದಲನೇ ಫೌಂಡೇಷನ್ ಸಂಕಲ್ಪ ಶಕ್ತಿ ಕೆಲ-ಕೆಲವೊಮ್ಮೆ ವ್ಯರ್ಥ ಹೆಚ್ಚು ಮತ್ತು ನಕರಾತ್ಮಕ ವ್ಯರ್ಥದಿಂದ ಸ್ವಲ್ಪ ಕಡಿಮೆಯಿದೆ. ಈ ಸಂಕಲ್ಪ ಶಕ್ತಿಯ ಉಪಯೋಗ ಎಷ್ಟು ಸ್ವ ಪ್ರತಿ ಅಥವಾ ವಿಶ್ವ ಪ್ರತಿ ಮಾಡುತ್ತೀರಿ ಅಷ್ಟು ಇನ್ನೂ ಹೆಚ್ಚಿಸಿರಿ ಏಕೆಂದರೆ ಸಂಕಲ್ಪದ ಆಧಾರದ ಮೇಲೆ ಮಾತು ಮತ್ತು ಕರ್ಮವಿರುತ್ತದೆ, ಅದಕ್ಕಾಗಿ ಸಂಕಲ್ಪ ಶಕ್ತಿಯನ್ನು ಪರಿವರ್ತನೆ ಮಾಡಿ. ಯಾವುದು ವ್ಯರ್ಥ ಮತ್ತು

ನಕಾರಾತ್ಮಕವಾಗಿ ಹೋಗುತ್ತದೆ, ಅದನ್ನು ಪರಿವರ್ತನೆ ಮಾಡಿ ವಿಶ್ವ ಕಲ್ಯಾಣದ ಪ್ರತಿ ಕಾರ್ಯದಲ್ಲಿ ತೊಡಗಿಸಿ. ಬಾಪ್ದಾದಾರವರು ಸಂಕಲ್ಪದ ಖಜಾನೆಯನ್ನು ಸರ್ವ ಶ್ರೇಷ್ಠವೆಂದು ಒಪ್ಪುತ್ತಾರೆ ಅದಕ್ಕೆ ಈ ಸಂಕಲ್ಪದ ಖಜಾನೆಯ ಪ್ರತಿ ಆರ್ಥಿಕತೆಯ ಅವತಾರವಾಗಿ. ಈ ದಿನವನ್ನು ಅವತರಣೆಯ ದಿನವೆಂದು ಹೇಳಲಾಗುತ್ತದೆ, ಬಾಪ್ದಾದಾರವರಿಗೆ ಎಲ್ಲಾ ಮಕ್ಕಳ ಪ್ರತಿ ಇದೇ ಶುಭ ಆಸೆಯಿದೆ ಇಂದು ಶಿವ ಅವತರಣೆಯ ಜೊತೆ ನೀವೆಲ್ಲರೂ ಆರ್ಥಿಕತೆಯ ಅವತಾರವಾಗಿ. ಸಂಕಲ್ಪದಲ್ಲಿ ಉಳಿತಾಯದ ಅರ್ಥವಾಗಿದೆ ವ್ಯರ್ಥದಿಂದ ಉಳಿಸುವುದು, ಆಗ ಬೇರೆ ಎಲ್ಲಾ ಖಜಾನೆಗಳು ಸ್ವತಃ ವಾಗಿ ಉಳಿತಾಯವಾಗುವುದು. 99ರಲ್ಲಿ ಏನಾಗುವುದು? 99 ಶುರುವಾಗಿಬಿಟ್ಟಿದೆ. ಮೊದಲು ಯೋಚಿಸುತ್ತಿದ್ದೀರಿ, 99ರಲ್ಲಿ ಏನಾಗುವುದು? ಏನಾದರೂ ಆಯಿತೇ? ಫೆಬ್ರವರಿ ಬಂದಿತು. ಒಂದುವೇಳೆ ಆದರೂ ಸಹ ನಿಮಗೆ ಏನಾಗಿದೆ? ನಿಮಗೆ ಏನಾದರೂ ನಷ್ಟವಿದೆಯೇ? ಭಯವಿದೆಯೇ? ಏನಾಗುವುದು, ಅದರ ಭಯವಿರುತ್ತದೆಯೇ? ನಿಮಗಾಗಿ ಒಳ್ಳೆಯದೇ ಆಗುವುದು. ಹೊಡೆದಾಟವನ್ನು ತೋರಿಸುತ್ತಾರೆ, ಒಳ್ಳೆಯ ಮಾತುಗಳನ್ನು ತೋರಿಸುತ್ತಾರೆ. ಆಟದಲ್ಲಿ ಭಯವಿರುತ್ತದೆಯೇ? ಏನಾಗುವುದು, ಏನಾಯಿತು, ಏನಾಯಿತು? ಹೀಗೆ ಯೋಚಿಸುವಿರೇ? ಮೋಜಿನಿಂದ ಕುಳಿತು ನೋಡುತ್ತಾರೆ. ಇದು ಸಹ ಬೇಹದ್ದಿನ ಆಟವಾಗಿದೆ. ಒಂದುವೇಳೆ ಸ್ವಲ್ಪವು ಭಯ ಅಥವಾ ಗಾಬರಿಯಾದರೆ – ಏನಾಗಿ ಹೋಯಿತು, ಏನಾಗಿ ಹೋಯಿತು ... ಹೀಗಂತು ಆಗಬಾರದು, ಏಕೆ ಆಯಿತು ಅಂದಾಗ ಇಂತಹ ಸ್ಥಿತಿಯವರಿಗೆ ಪ್ರಭಾವ ಬೀಳುತ್ತದೆ. ಒಳ್ಳೆಯದರಲ್ಲಿ ಒಳ್ಳೆಯ ಸ್ಥಿತಿ ಮತ್ತು ಏರುಪೇರಿನ ಸ್ಥಿತಿಯಲ್ಲಿ ಸ್ವಯಂ ಸಹ ಏರುಪೇರಿನಲ್ಲಿ ಬಂದು ಬಿಡುತ್ತಾರೆ, ಇದಕ್ಕಾಗಿ 99 ಆಗಲಿ ಅಥವಾ 2000 ಆಗಲಿ, ನಿಮಗೇನು? ಆಟ ನಡೆಯಲು ಬಿಡಿ. ಮಜದಿಂದ ನೋಡಿ. ಗಾಬರಿಯಾಗಬಾರದು. ಅಯ್ಯೋ ಇದೇನಾಗಿ ಹೋಯಿತು! ಸಂಕಲ್ಪದಲ್ಲಿಯು ಬರಬಾರದು. ಎಲ್ಲರು ಕೇಳುತ್ತಾರೆ 99ರಲ್ಲಿ ಏನಾಗುವುದು? ಏನಾದರೂ ಆಗುವುದು, ಇಲ್ಲವೋ. ಬಾಪ್ದಾದಾರವರು ಹೇಳುತ್ತಾರೆ ನೀವೇ ಪ್ರಕೃತಿಗೆ ಸೇವೆಯನ್ನು ಕೊಟ್ಟಿದ್ದೀರಿ ಚೆನ್ನಾಗಿ ಸ್ವಚ್ಛ ಮಾಡಲಿ ಎಂದು, ಅದಕ್ಕೆ ದೊಡ್ಡ ದೊಡ್ಡ ಪೆÇರಕೆಯನ್ನು ಕೊಟ್ಟಿದ್ದೀರಿ, ಸ್ವಚ್ಛ ಮಾಡಿ ಎಂದು. ಅಂದಾಗ ಗಾಬರಿ ಏಕೆ ಆಗುತ್ತೀರಿ? ನಿಮ್ಮ ಆದೇಶದಿಂದ ಅದು ಸ್ವಚ್ಛ ಮಾಡಿಸುತ್ತದೆ ಅಂದಾಗ ನೀವು ಏಕೆ ಏರುಪೇರಿನಲ್ಲಿ ಬರುತ್ತೀರಿ? ನೀವೇ ಆದೇಶ ಕೊಟ್ಟಿದ್ದೀರಿ. ಅಚಲ-ಅಡೋಲರಾಗಿ ಮನಸ್ಸು ಬುದ್ಧಿಯನ್ನು ಒಂದೇ ಬಾರಿ ಶಕ್ತಿಶಾಲಿಯನ್ನಾಗಿ ಮಾಡಿ ಅಚಲ ಅಡೋಲ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಪ್ರಕೃತಿಯ ಆಟವನ್ನು ನೋಡುತ್ತಾ ಹೋಗಿ. ಗಾಬರಿಯಾಗಬೇಡಿ. ನೀವು ಅಲೌಕಿಕರಾಗಿದ್ದೀರಿ, ಸಾಧಾರಣವಲ್ಲ. ಸಾಧಾರಣ ಜನರು ಏರುಪೇರಿನಲ್ಲಿ ಬರುವರು, ಗಾಬರಿಯಾಗುವರು. ಅಲೌಕಿಕ, ಮಾಸ್ಟರ್ ಸರ್ವಶಕ್ತಿವಂತ ಆತ್ಮರು ಆಟವನ್ನು ನೋಡುತ್ತ ತಮ್ಮ ವಿಶ್ವ ಕಲ್ಯಾಣದ ಕಾರ್ಯದಲ್ಲಿ ವ್ಯಸ್ತರಾಗಿರುವರು. ಒಂದುವೇಳೆ ಮನಸ್ಸು ಮತ್ತು ಬುದ್ಧಿಯನ್ನು ಫ್ರಿಯಾಗಿಟ್ಟರೇ ಗಾಬರಿಯಾಗುವಿರಿ. ಮನಸ್ಸು ಮತ್ತು ಬುದ್ಧಿಯಿಂದ ಲೈಟ್ ಹೌಸ್ ಆಗಿ, ಲೈಟ್ ಹರಡಿಸಿರಿ, ಈ ಕಾರ್ಯದಲ್ಲಿ ವ್ಯಸ್ತರಾಗಿ ಆಗ ವ್ಯಸ್ತ ಆತ್ಮರಿಗೆ ಭಯವಾಗುವುದಿಲ್ಲ, ಸಾಕ್ಷಿತನವಿರುವುದು; ಬೇರೆ ಏನೇ ಏರುಪೇರಿದ್ದರೇ ತಮ್ಮ ಬುದ್ಧಿಯನ್ನು ಸದಾ ಸ್ಪಷ್ಟವಾಗಿಟ್ಟುಕೊಂಡು, ಏಕೆ ಏನು ಇದರಲ್ಲಿ ಬುದ್ಧಿಯನ್ನು ವ್ಯಸ್ತವಾಗಿ ಅಥವಾ ತುಂಬಸಿಟ್ಟುಕೊಳ್ಳಬೇಡಿ, ಖಾಲಿ ಇಟ್ಟುಕೊಳ್ಳಿ. ಒಬ್ಬ ತಂದೆ ಮತ್ತು ನಾನು ... ಆಗ ಸಮಯಾನುಸಾರ ಪತ್ರ, ಟೆಲಿಫೆ◌ೇನ್, ಟಿ.ವಿ ಅಥವಾ ನಿಮ್ಮ ಮುಂದೆ ಏನೆಲ್ಲಾ ಸಾಧನಗಳು ಇವೆ, ಅವು ತಲುಪಿಲ್ಲವೆಂದರೂ ಬಾಪ್ದಾದಾರವರ ಡೈರೆಕ್ಷನ್ ಸ್ಪಷ್ಟವಾಗಿ ಗೊತ್ತಾಗುತ್ತದೆ (ಕ್ಯಾಚ್ ಮಾಡುವಿರಿ). ಈ ವಿಜ್ಞಾನದ ಸಾಧನಗಳನ್ನು ಎಂದೂ ಆಧಾರವನ್ನಾಗಿ ಮಾಡಿಕೊಳ್ಳಬೇಡಿ. ಉಪಯೋಗಿಸಿ ಆದರೆ ಸಾಧನಗಳ ಆಧಾರದ ಮೇಲೆ ತಮ್ಮ ಜೀವನವನ್ನು ಮಾಡಿಕೊಳ್ಳಬೇಡಿರಿ. ಕೆಲವೊಮ್ಮೆ ವಿಜ್ಞಾನದ ಸಾಧನವಿದ್ದರೂ ಉಪಯೋಗಿಸಲು ಸಾಧ್ಯವಿಲ್ಲ ಇದಕ್ಕಾಗಿ ಸೈಲೆನ್ಸ್ ಸಾಧನವಾಗಿದೆ-ಎಲ್ಲೇ ಇರಿ, ಎಂತಹದ್ದೇ ಪರಿಸ್ಥಿತಿಯಿರಲಿ ಬಹಳ ಸ್ಪಷ್ಟ ಮತ್ತು ಬಹಳ ಬೇಗ ಕೆಲಸದಲ್ಲಿ ಬರುವುದು. ಆದರೆ ತಮ್ಮ ಬುದ್ಧಿಯ ಲೈನ್ ಸ್ಪಷ್ಟವಾಗಿಟ್ಟುಕೊಳ್ಳಬೇಕು. ತಿಳಿಯಿತೇ. ನೀವೇ ಆಹ್ವಾನೆಯನ್ನು ಮಾಡುತ್ತಿದ್ದೀರಿ ಬೇಗ ಬೇಗ ಸ್ವರ್ಣಿಮ ಯುಗವು ಬರಲಿ ಎಂದು. ಸ್ವರ್ಣಿಮಯುಗದಲ್ಲಿ ಈ ಸ್ವಚ್ಛತೆ ಬೇಕಲ್ಲವೇ. ಪ್ರಕೃತಿ ಚೆನ್ನಾಗಿ ಸ್ವಚ್ಛ ಮಾಡುತ್ತದೆ.

ಇಂದು ಸಂಕಲ್ಪವಲ್ಲ ಆದರೆ ದೃಢ ಸಂಕಲ್ಪ ಏನು ಮಾಡಿದಿರಿ? ಏಕಾನಾಮಿಯ (ಉಳಿತಾಯದ) ಅವತಾರವಾಗಲೇ ಬೇಕು. ಸಂಕಲ್ಪದಲ್ಲಿ, ಮಾತಿನಲ್ಲಿ, ಸಾಧಾರಣ ಕರ್ಮದ ಏಕಾನಾಮಿ. ಮತ್ತು ಎರಡನೇ ಮಾತು - ಸದಾ ಬುದ್ಧಿಯನ್ನು ಸ್ಪಷ್ಟವಾಗಿಟ್ಟುಕೊಳ್ಳಿ. ಯಾವುದನ್ನು ಇನ್ನೊಂದು ಶಬ್ದಗಳಲ್ಲಿ ಬಾಪ್ದಾದಾರವರು ಹೇಳುತ್ತಾರೆ - ಸತ್ಯ ಹೃದಯದ ಮೇಲೆ ತಂದೆಯು ರಾಜಿಯಾಗುತ್ತಾರೆ (ಪ್ರಸನ್ನರಾಗುತ್ತಾರೆ). ಸತ್ಯ ಹೃದಯ, ಸ್ವಚ್ಛ ಹೃದಯ. ವರ್ತಮಾನ ಸಮಯದಲ್ಲಿ ಸತ್ಯತೆ ಮತ್ತು ಸ್ವಚ್ಛತೆಯ ಅವಶ್ಯಕತೆಯಿದೆ. ಹೃದಯದಲ್ಲಿ ಸತ್ಯತೆ, ಪರಿವಾರದಲ್ಲಿಯೂ ಸತ್ಯತೆ ಮತ್ತು ತಂದೆಯೊಂದಿಗೂ ಸತ್ಯತೆ. ತಿಳಿಯಿತೇ. ಇಂದು ಹೇಳಬಾರದಾಗಿತ್ತು ಆದರೆ ಹೇಳಿಬಿಟ್ಟರು. ಬಾಪ್ದಾದಾರವರ ಪ್ರೀತಿಯಿದೆಯಲ್ಲವೇ, ಸ್ವಲ್ಪ ಬಲಹೀನತೆ ಬಾಪ್ದಾದಾರವರು ನೋಡಲು ಸಾಧ್ಯವಿಲ್ಲ. ಬಾಪ್ದಾದಾರವರು ಸದಾ ಪ್ರತಿಯೊಂದು ಮಗುವನ್ನು ತಮ್ಮ ಹಾಗೆ ಸಂಪೂರ್ಣ ನೋಡಲು ಬಯಸುತ್ತಾರೆ.

ನಾಲ್ಕಾರು ಕಡೆ ಅಲುಗಾಟವಿದೆ, ಪ್ರಕೃತಿಯ ಎಲ್ಲಾ ತತ್ವ ಬಹಳ ಏರುಪೇರು ಮಾಡುತ್ತಿವೆ, ಒಂದು ಕಡೆಯು ಏರುಪೇರಿನಿಂದ ಮುಕ್ತರಿಲ್ಲ, ವ್ಯಕ್ತಿಗಳ ಅಲುಗಾಟವಿದೆ, ಪ್ರಕೃತಿಯ ಅಲುಗಾಟವಿದೆ, ಇಂತಹ ಸಮಯದಲ್ಲಿ ಯಾವಾಗ ಈ ಸೃಷ್ಟಿಯಲ್ಲಿ ನಾಲ್ಕಾರು ಕಡೆ ಏರುಪೇರಿದ್ದಾಗ ನೀವು ಏನು ಮಾಡುವಿರಿ? ಸೇಪ್ಟಿ (ಸುರಕ್ಷತೆ)ಯ ಸಾಧನ ಯಾವುದಾಗಿದೆ? ಸೆಕೆಂಡಿನಲ್ಲಿ ತಮ್ಮನ್ನು ವಿದೇಹಿ, ಅಶರೀರಿ ಅಥವಾ ಆತ್ಮ ಅಭಿಮಾನಿಗಳನ್ನಾಗಿ ಮಾಡಿಕೊಳ್ಳಿ ಆಗ ಏರುಪೇರಿನಲ್ಲಿ ಅಚಲರಾಗಿರುವಿರಿ. ಇದರಲ್ಲಿ ಸಮಯವು ಬೇಕಾಗುತ್ತದೆಯೇ? ಏನಾಗುವುದು? ಈಗ ಟ್ರಾಯಲ್ (ಪರಿಕ್ಷಿಸಿ) ಮಾಡಿ – ಒಂದು ಸೆಕೆಂಡಿನಲ್ಲಿ ಮನಸ್ಸು -

ಬುದ್ಧಿಯನ್ನು ಎಲ್ಲಿ ಬೇಕೋ ಅಲ್ಲಿ ಸ್ಥಿತ ಮಾಡಬಹುದೇ? (ಡ್ರಿಲ್) ಇದಕ್ಕೆ ಹೇಳಲಾಗುತ್ತದೆ- ಸಾಧನೆ. ಒಳ್ಳೆಯದು.

ದೇಶ-ವಿದೇಶದ ನಾಲ್ಕಾರು ಕಡೆಯ ತಂದೆಯ ಪ್ರೀತಿಯಲ್ಲಿ ಲವಲೀನ ಆತ್ಮರಿಗೆ, ಸದಾ ಸ್ವಯಂನ್ನು ಬ್ರಹ್ಮಾಚಾರಿ ಸ್ಥಿತಿಯಲ್ಲಿ ಸ್ಥಿತ ಮಾಡುವಂತಹ ಸ್ನೇಹಿ, ಸಹಯೋಗಿ ಮಕ್ಕಳಿಗೆ, ಸದಾ ಏಕನಾಮಿ (ಒಬ್ಬ ತಂದೆ) ಮತ್ತು ಏಕಾನಾಮಿ (ಉಳಿತಾಯ)ಯ ಕಾರ್ಯದಲ್ಲಿ ತೊಡಗಿಸುವಂತಹ ಸಾಹಸವಂತ ಮಕ್ಕಳಿಗೆ, ಸದಾ ಏರುಪೇರಿನಲ್ಲಿಯೂ ಅಚಲರಾಗಿರುವಂತಹ ನಿರ್ಭಯ ಆತ್ಮರಿಗೆ, ಸದಾ ಮೋಜನ್ನು ಆಚರಿಸುವಂತಹವರು, ತಂದೆಯ ಸಮೀಪ ಇರುವಂತಹ ಮಕ್ಕಳಿಗೆ ತಂದೆಯ ನೆನಪು ಪ್ರೀತಿ ಮತ್ತು ನಮಸ್ತೆ.

ಮಕ್ಕಳ ಎಲ್ಲಾ ಕಾರ್ಡಗಳು ಸಿಕ್ಕಿದವು. ಬಾಪ್ದಾದಾರವರು ನೋಡುತ್ತಿದ್ದಾರೆ, ಎಲ್ಲರು ಜನ್ಮದಿನದ ಕಾರ್ಡ ಮತ್ತು ವಿದೇಶದವರು ಪ್ರೀತಿಯ ದಿವಸದ ಕಾರ್ಡ ಕಳುಹಿಸಿದ್ದಾರೆ, ಪ್ರೀತಿಯ ಸಾಗರ ತಂದೆಯು ಎಲ್ಲಾ ಮಕ್ಕಳಿಗೆ ಶಿವರಾತ್ರಿಯ ಜೊತೆ-ಜೊತೆ ಪ್ರೀತಿಯಲ್ಲಿ ಲವಲೀನರಾಗುವ ದಿನದ ಶುಭಾಷಯಗಳನ್ನು ಕೊಡುತ್ತಿದ್ದಾರೆ. ಶುಭಾಷಯಗಳು, ಶುಭಾಷಯಗಳು, ಶುಭಾಷಯಗಳು.

ನಾಲ್ಕಾರು ಕಡೆಯ ದೇಶ, ಪಟ್ಟಣ, ಹಳ್ಳಿ, ನಾಲ್ಕಾರು ಕಡೆಯ ಮಕ್ಕಳಿಗೆ, ಎಲ್ಲದಕ್ಕಿಂತ ಮೊದಲು ಚಿಕ್ಕ-ಚಿಕ್ಕ ಹಳ್ಳಿಯ ಮಕ್ಕಳಿಗೆ ನೆನಪು ಪ್ರೀತಿ ಅಮತ್ತು ಶುಭಾಷಯಗಳು. ಜೊತೆಯಲ್ಲಿ ನಿಮ್ಮೆಲ್ಲರಿಗೂ ಶುಭಾಷಯಗಳು. ಎಷ್ಟು ಶುಭಾಷಯಗಳನ್ನು ಕೊಡುವುದು. ಎಷ್ಟು ನೀವು ಧಾರಣೆ ಮಾಡಲು ಸಾಧ್ಯವೋ ಅದಕ್ಕಿಂತಲು ಹೆಚ್ಚು ಶುಭಾಷಯಗಳು.

ವರದಾನ: ವರದಾನ: ಸ್ನೇಹ ಮತ್ತು ನವೀನತೆಯ ಅಥಾರಿಟಿಯಿಂದ ಸಮರ್ಪಿತ ಮಾಡಿಸುವ ಮಹಾನ್ ಆತ್ಮ ಭವ.
ಯಾರೆಲ್ಲಾ ಸಂಪರ್ಕದಲ್ಲಿ ಬಂದಿದ್ದಾರೆಯೋ ಅವರನ್ನು ಇಂತಹ ಸಂಬಂಧದಲ್ಲಿ ಕರೆ ತನ್ನಿರಿ, ಅವರು ಸಂಬಂಧದಲ್ಲಿ ಬರುತ್ತಾ-ಬರುತ್ತಾ ಸಮರ್ಪಣಾ ಬುದ್ಧಿ ಆಗಿ ಬಿಡಲಿ ಮತ್ತು ಹೇಳಲಿ - ತಂದೆಯು ಏನನ್ನು ಹೇಳಿದ್ದಾರೆಯೋ ಅದೇ ಸತ್ಯವಾದುದಾಗಿದೆ, ಇದಕ್ಕೆ ಹೇಳಲಾಗುತ್ತದೆ- ಸಮರ್ಪಣಾ ಬುದ್ಧಿ. ನಂತರ ಅವರ ಪ್ರಶ್ನೆಗಳು ಸಮಾಪ್ತಿಯಾಗಿ ಬಿಡುತ್ತದೆ. ಕೇವಲ ಇವರ ಜ್ಞಾನವು ಚೆನ್ನಾಗಿದೆ ಎಂದಷ್ಟೇ ಹೇಳಬಾರದು. ಆದರೆ ಇದು ಹೊಸ ಜ್ಞಾನವಾಗಿದೆ, ಅದು ಹೊಸ ಪ್ರಪಂಚವನ್ನು ತರುತ್ತದೆ - ಈ ಧ್ವನಿ ಹೊರಡಲಿ, ಆಗಲೇ ಕುಂಭಕರ್ಣರು ಮೇಲೇಳುತ್ತಾರೆ. ಅಂದಮೇಲೆ ನವೀನತೆಯ ಮಹಾನತೆಯ ಮೂಲಕ ಸ್ನೇಹ ಮತ್ತು ಅಥಾರಿಟಿಯ ಬ್ಯಾಲೆನ್ಸ್ ನಿಂದ ಈ ರೀತಿಯಲ್ಲಿ ಸಮರ್ಪಣೆ ಮಾಡಿಸಿರಿ, ಆಗ ಮೈಕ್ ತಯಾರಾಯಿತು ಎಂದು ಹೇಳುತ್ತೇವೆ.

ಸ್ಲೋಗನ್: ಸ್ಲೋಗನ್: ಒಬ್ಬ ಪರಮಾತ್ಮನ ಪ್ರಿಯರಾಗಿರಿ, ಆಗಲೇ ವಿಶ್ವದ ಪ್ರಿಯರಾಗುವಿರಿ.